**V Semester 5 Year B.Com.LL.B./B.A.LL.B. (Maj.-Min. System)/B.B.A.LL.B.**

**Examination, April/May 2022 (Dec. 2021)**

**CONSTITUTIONAL LAW – I**

**(2016-17 Batch Students)**

Duration : 3 Hours Max. Marks : 100

**Instructions : 1. Answer Q. No. 11 and any five of the remaining.**

**2. Q. No. 11 carries 20 marks and the remaining questions carry 16 marks each.**

**3. Answers should be written either in English or Kannada Completely.**

Q. No. 1. Examine the salient features of the Constitution of India. Marks : 16

ಭಾರತ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪರೀಕ್ಷಿಸಿ.

Q. No. 2. Define the term "State". Explain with the help of judicial decisions, the need for widening the definition of "State". Marks : 16

"ರಾಜ್ಯ" ಪದವನ್ನು ವ್ಯಾಖ್ಯಾನಿಸಿ. "ರಾಜ್ಯ"ದ ವ್ಯಾಖ್ಯಾನವನ್ನು ವಿಸ್ತರಿಸುವ ಅಗತ್ಯವನ್ನು ನ್ಯಾಯಾಂಗ ನಿರ್ಣಯಗಳ ಸಹಾಯದಿಂದ ವಿವರಿಸಿ.

Q. No. 3. Does Art. 14 permit classification ? If so, refer to the basis on which it is permissible. Marks : 16

ಅನುಚ್ಛೇದ 14 ವರ್ಗೀಕರಣಕ್ಕೆ ಅವಕಾಶ ಕೊಡುತ್ತದೆಯೇ ? ಹಾಗಿದ್ದಲ್ಲಿ ಯಾವ ಆಧಾರಗಳ ಮೇಲೆ ಅವಕಾಶವಿದೆ ಎಂಬುದನ್ನು ಉಲ್ಲೇಖಿಸಿ.

Q. No. 4. Discuss the freedom of speech and expression with the help of the decided cases. Marks : 16

ನಿರ್ಣಯಿಸಲ್ಪಟ್ಟ ಪ್ರಕರಣಗಳ ಸಹಾಯದಿಂದ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಚರ್ಚಿಸಿರಿ.

Q. No. 5. Discuss the rights of minorities to establish and manage the educational institutions. Marks : 16

ಅಲ್ಪ ಸಂಖ್ಯಾತರ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಮತ್ತು ಅವುಗಳನ್ನು ನಿರ್ವಹಿಸುವ ಹಕ್ಕುಗಳನ್ನು ಚರ್ಚಿಸಿ.

**P.T.O.**

Q. No. 6. Examine the freedom of religion guaranteed under the Indian Constitution. Marks : 16

ಭಾರತದ ಸಂವಿಧಾನದಲ್ಲಿ ನೀಡಲಾದ ಧಾರ್ಮಿಕ ಸ್ವಾತಂತ್ರ್ಯದ ಹಕ್ಕನ್ನು ಪರೀಕ್ಷಿಸಿ.

Q. No. 7. Explain the safeguards available against the arbitrary arrest and detention under Art. 22 of the Indian Constitution. Marks : 16

ಭಾರತ ಸಂವಿಧಾನದ 22 ರ ಪರಿಚ್ಛೇದದಲ್ಲಿ ದೊರೆಯುವ ಸ್ವೇಚ್ಛಾನುಸಾರ ದಸ್ತಗಿರಿ ಮತ್ತು ಬಂಧನದ ವಿರುದ್ಧ ಇರುವ ರಕ್ಷಣೆಗಳನ್ನು ವಿವರಿಸಿರಿ.

Q. No. 8. Narrate the safeguards available to the accused persons under Article 20 of the Constitution of India.

ಭಾರತದ ಸಂವಿಧಾನದ ಅನುಚ್ಛೇದ 20 ರಲ್ಲಿ ಆಪಾದಿತ ವ್ಯಕ್ತಿಗಳಿಗೆ ಇರುವ ರಕ್ಷಣೆಗಳನ್ನು ನಿರೂಪಿಸಿ.

Q. No. 9. 'Freedom of profession, occupation, trade or business given under Article 19(1)(g) of the Constitution is not absolute'. Discuss.

'ಸಂವಿಧಾನದ ಅನುಚ್ಛೇದ 19(1)(ಜಿ)ಯಲ್ಲಿ ನೀಡಿರುವ ವೃತ್ತಿ, ಉದ್ಯೋಗ, ವ್ಯಾಪಾರ ಅಥವಾ ವ್ಯವಹಾರ ಸ್ವತಂತ್ರತೆಯೂ ನಿರಂಕುಶವಾಗಿರುವುದಿಲ್ಲ.' ಚರ್ಚಿಸಿರಿ.

Q. No. 10. Write short note on **any two** of the following : Marks : 2×8=16

ಯಾವುದಾದರೂ **ಎರಡಕ್ಕೆ** ಲಘುಟಿಪ್ಪಣಿ ಬರೆಯಿರಿ :

(a) "Fundamental Duties".

"ಮೂಲಭೂತ ಕರ್ತವ್ಯಗಳು".

(b) Abolition of untouchability.

ಅಸ್ಪೃಶ್ಯತೆಯ ನಿರ್ಮೂಲನೆ.

(c) 'Citizenship'.

'ಪೌರತ್ವ'.



Q. No. 11. Solve **any two** of the following problems with reasons : Marks : 2×10=20

ಕೆಳಗಿನ ಯಾವುದಾದರೂ **ಎರಡಕ್ಕೆ** ಕಾರಣಗಳೊಂದಿಗೆ ಪರಿಹಾರ ಸೂಚಿಸಿರಿ :

(a) In view of the Bar Council of India's New Regulations 2009, Karnataka state law university also made a regulation fixing 30 year's age limit for 3 year LL.B., degree and 25 year's age limit for 5 year LL.B. degree for admission. Decide the reasonableness of the rule in the context of Right to Education.

ಬಾರ್ ಕೌನ್ಸಿಲ್ ಆಫ್ ಇಂಡಿಯಾ ಇವರು 2009 ರ ರೆಗ್ಯುಲೇಷನ್ ಅನ್ವಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯವು ನಿಯಮಗಳನ್ನು ರಚಿಸಿ 3 ವರ್ಷದ ಕಾನೂನು ಪದವಿಗೆ 30 ವರ್ಷಗಳು ಹಾಗೂ 5 ವರ್ಷದ ಕಾನೂನು ಪದವಿಗೆ 25 ವರ್ಷಗಳ ಒಳಗಿದ್ದಲ್ಲಿ ವ್ಯಕ್ತಿ ಪ್ರವೇಶ ಪಡೆಯಬಹುದೆಂದಿದೆ. ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕು ಎಂಬ ಹಿನ್ನೆಲೆಯಲ್ಲಿ ಈ ನಿಯಮಾವಳಿಗಳ ಯುಕ್ತತೆಯ ಬಗ್ಗೆ ನಿರ್ಧರಿಸಿರಿ.

(b) A mother, whose son was killed in Police custody of a state 'B', files a writ against the state under Art. 32 and claims compensation on the ground of violation of Art. 21. The state argues that it was discharging sovereign function and hence not liable to compensate. Decide.

'ಬ' ರಾಜ್ಯದ ಪೋಲಿಸರ ಅಧಿರಕ್ಷೆಯಲ್ಲಿ ಸಾವಿಗೀಡಾದ ಮಗನ ತಾಯಿಯು ರಾಜ್ಯದ ವಿರುದ್ಧ ಅನುಚ್ಛೇದ 32ರ ಅಡಿಯಲ್ಲಿ ರಿಟ್ ಅರ್ಜಿ ಸಲ್ಲಿಸಿ ಅನುಚ್ಛೇದ 21ರ ಉಲ್ಲಂಘನೆಯ ಆಧಾರದ ಮೇಲೆ ಪರಿಹಾರವನ್ನು ಕೋರುವಳು. ರಾಜ್ಯವು ತಾನು ಸಾರ್ವಭೌಮ ಕಾರ್ಯ ನಿರ್ವಹಣೆಯಲ್ಲಿ ತೊಡಗಿತ್ತೆಂದೂ ಮತ್ತು ಹೀಗಾಗಿ ತಾನು ಪರಿಹಾರ ನೀಡಲು ಹೊಣೆಗಾರನಲ್ಲವೆಂದೂ ವಾದಿಸುವುದು. ನಿರ್ಧರಿಸಿರಿ.

(c) The University of Punjab declared Punjabi as the sole medium of instruction in the affiliated colleges. The management of a college challenges the action of the Punjab University. Decide.

ಪಂಜಾಬ್ ವಿಶ್ವವಿದ್ಯಾಲಯವು ತನ್ನ ಎಲ್ಲ ಸಂಯೋಜಿತ ಮಹಾವಿದ್ಯಾಲಯಗಳಲ್ಲಿ ಪಂಜಾಬಿ ಭಾಷೆಯನ್ನು ಏಕಮಾತ್ರ ಶಿಕ್ಷಣ ಮಾಧ್ಯಮವೆಂದು ಘೋಷಿಸಿತು. ಒಂದು ಮಹಾವಿದ್ಯಾಲಯದ ಆಡಳಿತ ಮಂಡಳಿಯವರು ಪಂಜಾಬ್ ವಿಶ್ವವಿದ್ಯಾಲಯದ ಈ ಕ್ರಮವನ್ನು ಪ್ರಶ್ನಿಸುತ್ತಾರೆ. ನಿರ್ಣಯಿಸಿರಿ.

---